C.R.P.67

Form No.4 (Civil)
Deposition Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆ: 166/2020**

**ಪ್ರಾಸಾ. 2 ಚಾಸಾ. 3**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಕೆಂಪರಾಜು |
| **ತಂದೆಯ ಹೆಸರು** | : | ವೆಂಕಟಪ್ಪ |
| **ವಯಸ್ಸು** | : | 29 ವರ್ಷಗಳು |
| **ಉದ್ಯೋಗ** | : | ಗಾರೆ ಕೆಲಸ |
| **ವಾಸ** | : | ರಾಮನಗರ. |

**ಪ್ರಮಾಣ ವಚನ ಬೋಧಿಸಿದ ದಿನಾಂಕ: 04.07.2024**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಆತ ನನ್ನ ಭಾವನಾಗಬೇಕು. ಆತ ನನ್ನ ಸಹೋದರಿ ಗೌರಮ್ಮನ ಗಂಡ. ಚಾಸಾ-2 ನನ್ನ ತಂದೆ. ಚಾಸಾ-1 ನನ್ನ ತಾಯಿ.

2. ನಮ್ಮ ತಾಯಿ-ತಂದೆಗೆ ನಾನು ಹಾಗೂ ಗೌರಮ್ಮ ಇಬ್ಬರು ಮಕ್ಕಳು. ಆರೋಪಿಗೂ ಮತ್ತು ಗೌರಮ್ಮನಿಗೂ ಆಕೆ ತೀರಿಕೊಳ್ಳುವ ಸುಮಾರು 4 ವರ್ಷಗಳ ಹಿಂದೆ ಮುತ್ತತ್ತಿಯ ಹನುಮಂತನ ದೇವಸ್ಥಾನದಲ್ಲಿ ಮದುವೆ ಮಾಡಿರುತ್ತೇವೆ. ಮದುವೆ ಸಮಯದಲ್ಲಿ ಆರೋಪಿಗೆ ಒಡವೆ, ವಸ್ತ್ರ, ನಗದು ಏನನ್ನು ವರದಕ್ಷಿಣೆಯನ್ನಾಗಿ ಕೊಟ್ಟಿರಲಿಲ್ಲ. ಮದುವೆ ನಂತರ ನನ್ನ ತಂಗಿ ಹಾಗೂ ನನ್ನ ಭಾವ ಆರೋಪಿ ಇಬ್ಬರು ಲಕ್ಷ್ಮೀಪುರದ ನವಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ 1 ನೇ ಮಹಡಿಯಲ್ಲಿ ವಾಸವಿದ್ದರು. ಮದುವೆ ಆದ ಒಂದೆರಡು ವರ್ಷಗಳ ಕಾಲದವರೆಗೆ ಅವರಿಬ್ಬರೂ ಚೆನ್ನಾಗಿ ಇದ್ದರು.

3. ಆ ನಂತರ ಆರೋಪಿ ನನ್ನ ತಂಗಿಗೆ ದುಡ್ಡು, ಕಾಸು, ಒಡವೆಯನ್ನು ನಿಮ್ಮ ತಂದೆ-ತಾಯಿಯಿಂದ ತೆಗೆದುಕೊಂಡು ಬಾ ಎಂದು ಕಿರುಕುಳ ಕೊಡಲು ಶುರುಮಾಡಿದ್ದನು. ಈ ವಿಚಾರವನ್ನು ನನ್ನ ತಂಗಿಯೇ ಅವಳು ಬದುಕಿದ್ದಾಗ ನಮಗೆ ಹೇಳಿರುತ್ತಾಳೆ. ಆ ಸಂದರ್ಭದಲ್ಲಿ ಒಮ್ಮೆ ನಮ್ಮ ತಂದೆ-ತಾಯಿ ಸಾಲ ಮಾಡಿ ರೂ. 40,000/- ಹಣವನ್ನು ಆರೋಪಿಗೆ ಹೊಂದಿಸಿ ಕೊಟ್ಟಿರುತ್ತಾರೆ. ಆರೋಪಿಗೆ ನಾನು, ನಮ್ಮ ತಂದೆ-ತಾಯಿ ಹಾಗೂ ನಮ್ಮ ಕೆಲವು ಸಂಬಂಧಿಕರು ಗೌರಮ್ಮಳಿಗೆ ಹೊಡಿಬೇಡ, ಹಿಂಸೆ ಮತ್ತು ಕಿರುಕುಳ ಕೊಡಬೇಡ ಮತ್ತು ಹಣಕ್ಕೆ ಪೀಡಿಸಬೇಡ ಎಂದು ಹೇಳಿರುತ್ತೇವೆ. ಆದರೆ ನಾವು ಹಣ ಕೊಟ್ಟರುೂ, ಬುದ್ದಿವಾದವನ್ನು ಹೇಳಿದರುೂ ಸಹ ಆರೋಪಿ ಸರಿ ಹೋಗಿರುವುದಿಲ್ಲ. ಆರೋಪಿ ತನ್ನ ಎಂದಿನ ಚಾಳಿಯನ್ನು ಮುಂದುವರೆಸಿಕೊಂಡು ಹೋಗಿರುತ್ತಾನೆ.

3. ಈಗ್ಗೆ 4 ವರ್ಷದ ಹಿಂದೆ ನನ್ನ ಸಹೋದರಿ ಮೊದಲಿಗೆ ತನ್ನ ತಾಯಿಗೆ ದೂರವಾಣಿ ಕರೆ ಮಾಡಿ, ದುಡ್ಡಿನ ವಿಚಾರವಾಗಿ ಗಲಾಟೆ ನಡೆಯುತ್ತಿರುವ ಬಗ್ಗೆ, ತೊಂದರೆಯಾಗುತ್ತಿರುವ ಬಗ್ಗೆ ಮೊದಲಿಗೆ ರಾತ್ರಿ 8.00 ಗಂಟೆಯ ಸಮಯದಲ್ಲಿ ತಿಳಿಸಿರುತ್ತಾಳೆ. ಆಗ ನನ್ನ ತಾಯಿ ನನ್ನ ಸಹೋದರಿಗೆ, ಏನು ತೊಂದರೆ ಮಾಡಿಕೊಳ್ಳಬೇಡ, ಈಗ ಮಳೆ ಬರುತ್ತಿದೆ, ಬೆಳಗ್ಗೆ ಬರುತ್ತೇವೆ ಎಂದು ಹೇಳಿ ಸಮಾಧಾನ ಮಾಡಿರುತ್ತಾರೆ. ಆ ನಂತರ ಸುಮಾರು 10.00 ಗಂಟೆಯ ಸಂದರ್ಭದಲ್ಲಿ ನಾರಾಯಣಮ್ಮನಿಗೆ ನನ್ನ ಸಹೋದರಿ ದೂರವಾಣಿ ಕರೆ ಮಾಡಿರುತ್ತಾಳೆ. ಆದರೆ ಅವರು ಮಲಗಿದ್ದ ಕಾರಣ ಕರೆಯನ್ನು ಸ್ವೀಕರಿಸಿರುವುದಿಲ್ಲ. ಮರುದಿನ ಬೆಳಗ್ಗೆ ಆರೋಪಿತ ಅಂದರೆ ನನ್ನ ಭಾವ ರವಿ ನನಗೆ ದೂರವಾಣಿ ಕರೆ ಮಾಡಿ, ನನ್ನ ಸಹೋದರಿ ಗೌರಮ್ಮ ರೂಮಿನ ಬಾಗಿಲು ತೆಗೆಯುತ್ತಿಲ್ಲ, ರಾತ್ರಿ ಬಾಗಿಲು ಹಾಕಿಕೊಂಡವಳು ತೆಗೆದಿಲ್ಲ, ಬನ್ನಿ ಎಂದು ಕರೆದಿರುತ್ತಾನೆ. ನನ್ನ ತಾಯಿ ರವಿಗೆ ನನ್ನ ಸಹೋದರಿಗೆ ಫೋನ್ ಕೊಡು ಮಾತನಾಡುತ್ತೇನೆ ಎಂದು ಹೇಳಿರುತ್ತಾರೆ. ಆದರೆ, ಅವನು ನನ್ನ ಸಹೋದರಿ ಬಾಗಿಲು ಹಾಕಿಕೊಂಡು ಒಳಗೆ ನೇಣು ಹಾಕಿಕೊಂಡಿರುತ್ತಾಳೆ ಎಂದು ಹೇಳಿರುತ್ತಾನೆ.

4. ನಂತರ ನಮ್ಮ ಕುಟುಂಬದವರೆಲ್ಲ ನವಗ್ರಾಮಕ್ಕೆ ಹೋಗಿ, ನನ್ನ ಸಹೋದರಿ ಮತ್ತು ಆರೋಪಿ ವಾಸವಿದ್ದ ಮನೆಗೆ ಹೋಗಿ ನೋಡಲಾಗಿ, ಆರೋಪಿತರ ಮನೆಯವರು ಬಾಗಿಲು ತೆರೆದಿರುವುದಾಗಿ ಹೇಳಿರುತ್ತಾರೆ. ನಾವು ಅಲ್ಲಿಗೆ ಹೋಗುವಷ್ಟರಲ್ಲಿ ಬಾಗಿಲು ತೆಗೆದಿರುತ್ತಾರೆ. ನಾವು

ಒಳಗಡೆ ಹೋಗಿ ನೋಡಿದಾಗ, ನನ್ನ ಸಹೋದರಿ ದೇಹವು ನೇಣು ಬಿಗಿದ ಸ್ಥಿತಿಯಲ್ಲಿ ಇದ್ದು, ಕಾಲುಗಳು ನೆಲವನ್ನು ತಾಕಿಕೊಂಡಂತೆ ಇದ್ದವು. ಪಾದಗಳ ಕೆಳಗೆ ಯಾವುದೇ ಜಾಗ ಇರಲಿಲ್ಲ.

5. ಈ ವಿಚಾರ ತಿಳಿದ ಕೂಡಲೇ ನಮ್ಮ ತಾಯಿ ಹಾಗೂ ನಾವು ಕಗ್ಗಲೀಪುರ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಅಲ್ಲಿಗೆ ಹೋಗಿ ನನ್ನ ಸಹೋದರಿ ಸಾವು ಯಾವ ರೀತಿ ಆಗಿರುತ್ತದೆ ಎಂಬ ಬಗ್ಗೆ ದೂರನ್ನು ನನ್ನ ಭಾವನ ವಿರುದ್ಧ ನೀಡಿರುತ್ತೇವೆ. ನನ್ನ ಸಹೋದರಿ ಆತ್ಮಹತ್ಯೆ ಮಾಡಿಕೊಳ್ಳುವ ಸ್ವಭಾವದವಳಲ್ಲ, ಆದರೆ ಅವಳಿಗೆ ಹೊಡೆದು ಬಡೆದು ಕಿರುಕುಳ ನೀಡಿ ಸಾಯಿಸಲಾಗಿರುತ್ತದೆ. ಆದ ಕಾರಣ ನನ್ನ ತಾಯಿ ದೂರನ್ನು ನೀಡಿರುತ್ತಾರೆ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದು, ಅನುಮತಿ ನೀಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ಶ್ರೀ. ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.